# ಮೊದಲನೆಯ ಕಿರು ಪರೀಕ್ಷೆ

(ಕಲಿಕಾ ಫಲ ಆಧರಿತ)

ಸಮಯ: 45 ನಿ. **9ನೇ ತರಗತಿ ಪ್ರಥಮ ಭಾಷೆ ಕನ್ನಡ** ಅಂಕಗಳು –20

| ಹೆಸರು | | ವಿಭಾಗ | | ಹಾಜರಾತಿ ಸಂಖ್ಯೆ | |
|---|---|---|---|---|---|

**ಅ) ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ಆರಿಸಿ ಬರೆಯಿರಿ.** 1*2=2

1. ಕಿಶೋರಿಯರ ಸಬಲೀಕರಣ ಕಾರ್ಯಕ್ರಮ ; ಉತ್ತರ : ____________________

ಅ) ಸಖಿ ಆ) ಸ್ವಚ್ಛ ಭಾರತ ಅಭಿಯಾನ ಇ) ಅಕ್ಷರ ದಾಸೋಹ ಈ) ಬಾಲ್ಯವಿವಾಹ

2. ಪ್ಲಾಸ್ಟಿಕಾಸುರನ ತಂದೆಯ ಹೆಸರು ; ಉತ್ತರ : ____________________

ಅ) ಹರ್ಷ ಆ) ವಿಜ್ಞಾನೇಶ್ವರ ಈ) ಸುಮತೇಶ್ವರ ಈ) ಭಾಗ್ಯದ ಬಳೆಗಾರ

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** 1*2=**2**

3. ಯಾವುದಾದರೂ ನಾಲ್ಕು ಸಾಮಾಜಿಕ ಪಿಡುಗುಗಳನ್ನು ಹೆಸರಿಸಿ ?

4. ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಹುಟ್ಟಿದ ದಿನವನ್ನು ಯಾವ ದಿನವನ್ನಾಗಿ ಆಚರಿಸಲಾಗುತ್ತದೆ?

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ.** 2*3=6

5. **"ಹಸಿರು ನಮ್ಮೆಲ್ಲರ ಉಸಿರು"** ಎಂಬ ನುಡಿಯ ಅರ್ಥವನ್ನು ವಿಶ್ಲೇಷಿಸಿ ಬರೆಯಿರಿ.

6. ನಿಮಗೆ ಇಷ್ಟವಾದ ನುಡಿಮುತ್ತೊಂದನ್ನು ಆಯ್ಕೆ ಮಾಡಿಕೊಂಡು ಅದರ ಬಗ್ಗೆ ವಿವರಿಸಿ ಬರೆಯಿರಿ.

7. ಮರ, ಕಾಡು, ನಾಡು, ಪ್ಲಾಸ್ಟಿಕ್, ವಾಯು ಮಾಲಿನ್ಯ, ಹೊಗೆ, ಜಲ, ಧೂಮಪಾನ, ಶಾಲೆ, ಬಾಲ್ಯ ವಿವಾಹ – ಈ ಪದಗಳನ್ನು ಬಳಸಿಕೊಂಡು ನಾಲ್ಕು ಘೋಷಣಾ ವಾಕ್ಯಗಳನ್ನು ರಚಿಸಿ.

**ಈ) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** 3*2=6

8. ಕೆಳಗಿನ ಜನಪದ ಗೀತೆಯ ಭಾಗವನ್ನು ಅರ್ಥಮಾಡಿಕೊಂಡು ಅಲ್ಲಿನ ಪಾತ್ರಗಳಿಗೆ ಅನುಸಾರವಾಗಿ ಸಂಭಾಷಣೆಯನ್ನು ಬರೆಯಿರಿ.

ಭಾಗ್ಯದ ಬಳೆಗಾರ ಹೋಗಿ ಬಾ ನನ್ತವರಿಗೆ
ನಿನ್ನ ತವರೂರ ನಾನೇನು ಬಲ್ಲೇನು
ಗೊತ್ತಿಲ್ಲ ಎನಗೆ ಗುರಿಯಿಲ್ಲ ಎಲೆ ಬಾಲೆ
ತೋರಿಸು ಬಾರೇ ತವರೂರ ॥ 1 ॥

ಬಾಳೆ ಬಲಕ್ಕೆ ಬಿಡೊ ಸೀಬೆ ಎಡಕ್ಕೆ ಬಿಡೊ
ನಟ್ಟ ನಡುವೇಲಿ ನೀ ಹೋಗೋ ಬಳೆಗಾರ
ಅಲ್ಲಿಹುದೇ ನನ್ನ ತವರೂರು
ಮುತ್ತೈದೆ ಎಲೆ ಹೆಣ್ಣೆ ತೋರು ಬಾರೆ ತವರೂರ ॥ 2 ॥

ಆಲೆ ಆಡುತಾವೆ ಗಾಣ ತಿರುಗುತಾವೆ
ನವಿಲು ಸಾರಂಗ ನಲಿತಾವೆ ಬಳೆಗಾರ
ಅದೇ ಕಾಣೋ ನನ್ನ ತವರೂರು
ಮುತ್ತೈದೆ ಎಲೆ ಹೆಣ್ಣೆ ತೋರು ಬಾರೆ ತವರೂರ ॥ 3 ॥

9. ಈ ಕೆಳಗಿನ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ, ನಿಮಗೆ ಇಷ್ಟವಾದ ಒಂದು ಚಿತ್ರವನ್ನು ಆಯ್ದುಕೊಂಡು, ಅಲ್ಲಿ ಏನು ನಡೆಯುತ್ತಿರಬಹುದು? ಎಂಬುದನ್ನು ಕಲ್ಪಿಸಿಕೊಂಡು ಸಂಭಾಷಣೆಯನ್ನು ಬರೆಯಿರಿ.





**ಉ) ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** 4*1=4

10. ಅ) ತಂಬಾಕು ಸೇವನೆಯಿಂದ ಮನುಷ್ಯನ ಆರೋಗ್ಯದ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಬರೆಯಿರಿ.

ಆ) ನೀವು ಗುರುತಿಸಿದ ಸಾಧಕರ ಬಗ್ಗೆ ವ್ಯಕ್ತಿಚಿತ್ರವೊಂದನ್ನು ಬರೆಯಿರಿ.